Publication ~ Sanjevani
Date ~ December 12, 2007
Edition ~ Bangalore

MapmyIndia device

# ‘ಮ್ಯಾಪ್ ಮೈ ಇಂಡಿಯಾ’ ಮುಂಚೂಣಿಯಲ್ಲಿ



**ಮ್ಯಾ**ಪ್‌ಮೈ ಇಂಡಿಯಾ ಭಾರತದಲ್ಲಿ ಮುಂಚೂಣಿಯಲ್ಲಿರುವ ಪ್ರಯಾಣ ಭೂಪಟ ಮಾಹಿತಿ ಸೇವೆಯ ಸಂಸ್ಥೆ, ಇದೀಗ ಈ ಸಂಸ್ಥೆ ಜಿಪಿಎಸ್ ತಂತ್ರಜ್ಞಾನ ಬಳಸಿ ಭಾರತದಲ್ಲಿ ಓಡಾಡುವ ಕಾರುಗಳಿಗಾಗಿ ಪ್ರಯಾಣದ ಸಾಧನವನ್ನು ಪರಿಚಯಿಸುತ್ತಿದೆ. ಉಪಗ್ರಹ ಸಂಪರ್ಕ ಹೊಂದಿರುವ ಈ ಕಿರುಸಾಧನದಲ್ಲಿ ಭಾರತದ ಪ್ರತಿಯೊಂದು ಸ್ಥಳ ಹಾಗೂ ರಸ್ತೆಗಳ ಮಾಹಿತಿ ಹೊಂದಿದೆ. ಜೊತೆಗೆ ಸ್ಥಳದ ಧ್ವನಿ ಮಾಹಿತಿ ಹೊಂದಿದೆ. ನಗರದೊಳಗೆ ಹಾಗೂ ನಗರದ ಹೊರಗೆ (ನಗರದ್ದೇ ಆದ ಪ್ರತ್ಯೇಕ ನಕ್ಷೆ ಹೊಂದದೇ ಹಾಗೂ ಭಾರತದ ಪ್ರತ್ಯೇಕ ನಕ್ಷೆಯನ್ನು ಒಳಗೊಂಡಿದೆ)

ಇದರ ಮಾರುಕಟ್ಟೆ ಹಾಗೂ ನಿರ್ವಹಣೆಗೆ ಹೆಚ್ಚಿನ ಐದು ದಶಲಕ್ಷ ಡಾಲರ್‌ಗಳಷ್ಟು ಹಣವನ್ನು ವಿನಿಯೋಗಿಸಲಿದೆ. ಈಗಾಗಲೇ ಭಾರತದ ಸಂಪೂರ್ಣ ನಕ್ಷೆ ತಯಾರಿಕೆಗೆ ಐದು ದಶಲಕ್ಷ ಡಾಲರ್‌ಗಳಷ್ಟು ಹಣವನ್ನು ವೆಚ್ಚಮಾಡಿದೆ.

ಈಗಾಗಲೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ ನ್ಯಾವಿಗೇಷನ್‌ನ ಜಿಪಿಎಸ್ ತಂತ್ರಜ್ಞಾನ ಸಾಕಷ್ಟು ಪ್ರಚಲಿತದಲ್ಲಿದೆ. ಈಗಾಗಲೇ ಜಾಗತಿಕ ಮಟ್ಟದಲ್ಲಿ 20 ದಶಲಕ್ಷ ನ್ಯಾವಿಗೇಷನ್ ಸಾಧನ ಬಳಕೆಯಲ್ಲಿದೆ. ಯುರೋಪ್‌ನಲ್ಲಿ ಇದರ ಮಾರುಕಟ್ಟೆ ಈಗ 30 ದಶಲಕ್ಷ ಅಮೆರಿಕನ್ ಡಾಲರ್‌ಗಳಿಗೆ ಏರಿದೆ. ಭಾರತದ ನಿಖರ ನಕ್ಷೆ ತಯಾರಿಕೆಗೆ ಈಗಾಗಲೇ 5 ದಶಲಕ್ಷ ಅಮೆರಿಕನ್ ಡಾಲರ್‌ಗಳನ್ನು ಬಳಸಲಾಗಿದೆ. ಇನ್ನೂ ಹೆಚ್ಚುವರಿ 5 ದಶಲಕ್ಷ ಡಾಲರ್‌ಗಳಷ್ಟು ಹಣವನ್ನು ಮಾರುಕಟ್ಟೆ ಸೃಷ್ಟಿಸಲು ವಿನಿಯೋಗಿಸಿದ್ದೇವೆ. ಮುಂದಿನ ಒಂದು ವರ್ಷದೊಳಗೆ ನಕ್ಷೆಯ ಮತ್ತಷ್ಟು ಹೆಚ್ಚುವರಿ ಮಾಹಿತಿಗಳನ್ನು ಸೇರಿಸಲಾಗುವುದು ಎಂದು ಮ್ಯಾಪ್‌ಮೈ ಇಂಡಿಯಾದ ಪ್ರಾಯೋಜಕ ಹಾಗೂ ಇನ್ಫೋಸಿಸ್‌ನ ಮುಖ್ಯ ವ್ಯವಸ್ಥಾಪಕ ಹಾಗೂ ಮುಖ್ಯ ನಿರ್ವಹಣೆಗಾರ ರಾಕೇಶ್ ವರ್ಮ ತಿಳಿಸಿದ್ದಾರೆ.

ಅತೀ ಹೆಚ್ಚು ಗ್ರಾಹಕರ ಬಳಿ ಹೋಗಲು ಜಿಪಿಎಸ್ ನ್ಯಾವಿಗೇಷನ್ ಅನ್ನು ಮ್ಯಾಪ್‌ಮೈಇಂಡಿಯಾ ಸಂಸ್ಥೆ ಜಾಲತಾಣ ಮೊಬೈಲ್ ಹಾಗೂ ಕಾರ್‌ಗಳ ಒಳಗಿನ ಜಾಗದಲ್ಲಿಡಲು ತೀರ್ಮಾನಿಸಿದೆ. ಸಂಸ್ಥೆ ಈಗಾಗಲೇ ಪರಿಸರ ಸಂಘಗಳು, ವಾಹನ ತಯಾರಿಕಾ ಕಂಪನಿಗಳು, ಹ್ಯಾಂಡ್‌ಸೆಟ್‌ಗಳು ಹಾಗೂ ಪಿಎನ್‌ಡಿ ತಯಾರಕರು, ಸಾಫ್ಟ್‌ವೇರ್ ಮಾರಾಟಗಾರರು, ಮೊಬೈಲ್ ಸೇವಾ ಸಂಸ್ಥೆಗಳು, ಇಂಟರ್‌ನೆಟ್ ರೀಟೈಲ್ ಮಾರಾಟಗಾರರು, ಕಾರ್‌ಗಳ ಮಾರಾಟಗಾರರು ಹಾಗೂ ಎಲೆಕ್ಟ್ರಾನಿಕ್ ಉತ್ಪನ್ನಗಳ ಮಾರಾಟಗಾರರೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಮ್ಯಾಪ್‌ಮೈ ಇಂಡಿಯಾ ನ್ಯಾವಿಗೇಟರ್, ಮ್ಯಾಪ್ ಮೈಇಂಡಿಯಾದ ಇನ್-ಕಾರ್ ಜಿಪಿಎಸ್ ನ್ಯಾವಿಗೇಷನ್ ಉತ್ಪನ್ನ.